ಓ.ಎಸ್. ನಂ. 278/2016
ಪಿ.ಡಬ್ಲ್ಯೂ:1

<u>ಸಾಕ್ಷಿಯನ್ನು ದಿನಾಂಕ:**16.03.2021** ರಂದು ಕರೆಸಿ ಸತ್ಯ ಪ್ರಮಾಣ ಮಾಡಿತಸಲಾಯಿತ್ತು.</u>

<u>ಪಾಟೀಸವಾಲು: ಶ್ರೀ ಎಂ.ಎಲ್.ಎಸ್. ವಕೀಲರಿಂದ</u>

ನನ್ನ ಮುಖ್ಯ ವಿಚಾರಣೆಯ ಅಂಶಗಳನ್ನು ನಾನು ಓದಿಲ್ಲ, ವಕೀಲರು ನನಗೆ ಅದರ ವಿಚಾರಗಳನ್ನು ತಿಳಿಸಿರುತ್ತಾರೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ . ಜಮೀನಿನ ವಿಚಾರವಾಗಿ ಈ ದಾವೆ ಹಾಕಿದ್ದೇನೆ. ಅದು ನನ್ನ ತಾಯಿಯ ಆಸ್ತಿ. ಅದನ್ನು ಪ್ರತಿವಾದಿಗಳು ನೋಡಿಕೊಳ್ಳುತ್ತಿದ್ದು ನಾನು ಕೇಳಲು ಹೋದಾಗ ಗಲಾಟೆ ಮಾಡಿದ್ದರು. ದಾವಾ ಸ್ವತ್ತಿನ ಸರ್ವೆ ನಂ. 97 ಆಗಿರುತ್ತದೆ. ಅದರಲ್ಲಿ 5 ಎಕರೆ ಇದೆ. ನನ್ನ ತಾಯಿಯ ಹೆಸರು ಮಾರಕ್ಕ. ನನ್ನ ತಾಯಿಯ ತಂದೆಯ ಹೆಸರು ರಂಗದಾಸಪ್ಪ. ಅವರು ನನ್ನ ತಾತ. ಅವರನ್ನು ಕುರುಡು ರಂಗದಾಸಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ.

**2.** ಪ್ರತಿವಾದಿಗಳು ನನ್ನ ತಾಯಿಯ ತಮ್ಮನ ಮಕ್ಕಳು. ದಾವಾ ಸ್ವತ್ತನ್ನು ನನ್ನ ತಾಯಿ ಮುದ್ದರಂಗಮ್ಮ ಎಂಬುವವರಿಂದ ಖರೀದಿ ಮಾಡಿದ್ದರು. ಯಾವ ವರ್ಷದಲ್ಲಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಚಿಕ್ಕವಳಿದ್ದೆ. ದಾವಾ ಸ್ವತ್ತನ್ನು ಪ್ರತಿವಾದಿಗಳ ತಂದೆ ನಾಗಯ್ಯನಿಗೆ ನನ್ನ ತಾಯಿ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ದಿ:13.01.1973 ರಲ್ಲಿ 300 ರೂ.ಗೆ ನೋಂದಣಿ ಕ್ರಯ ಮಾಡಿದ್ದಾರೆ ಎಂದರೆ ಸುಳ್ಳು ದಾವಾ ಸ್ವತ್ತಿನ ಬಗ್ಗೆ ಯಾವ ದಾಖಲೆ ಹಾಕಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರಿನಲ್ಲಿ ಖಾತೆ-ಪಹಣಿ ಇರಲಿಲ್ಲ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇರುತ್ತದೆ.
ಸಹಿ/-

ಸಿ.ಜೆ. ಮತ್ತು ಪ್ರ.ದ. ನ್ಯಾದಂ.
ಕೊರಟಗೆರೆ.